# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1207 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಜಬ್ಬರ್ |
| ಉತ್ತರಿಸುವ ದಿನಾಂಕ | : | 13-03-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು);</td><td>ಸಮಾಜ ಕಲ್ಯಾಣ ಇಲಾಖೆ ವತಿಯಿಂದ 67 ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ (1ರಿಂದ 5ನೇ ತರಗತಿ)ಗಳನ್ನು, 1215 ಸಂಖ್ಯೆ ಮೆಟ್ರಿಕ್ ಪೂರ್ವ ಮತ್ತು 04 ದೀನ್‌ದಾಯಳ್ ಉಪಾಧ್ಯಾಯ ವಿದ್ಯಾರ್ಥಿಗಳು ಹಾಗೂ 719 ಸಂಖ್ಯೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಸೇರಿದಂತೆ ಒಟ್ಟಾರೆ 2005 ವಸತಿ ನಿಲಯಗಳನ್ನು ನಿರ್ವಹಿಸಲಾಗುತ್ತಿದ್ದು, ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವಿವರ</th><th>ಒಟ್ಟು</th></tr>
<tr><td>01</td><td>ಸರ್ಕಾರಿ ವಸತಿ ಶಾಲೆ</td><td>67</td></tr>
<tr><td>02</td><td>ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ</td><td>1215</td></tr>
<tr><td>03</td><td>ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ</td><td>719</td></tr>
<tr><td>04</td><td>ದೀನದಯಾಳ್ ಉಪಾದ್ಯಾಯ ವಿ.ನಿ</td><td>4</td></tr>
<tr><td></td><td>ಒಟ್ಟು</td><td>2005</td></tr>
</table>
ಜಿಲ್ಲಾವಾರು ವಿದ್ಯಾರ್ಥಿ ನಿಲಯಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಆ)</td><td>ವಿದ್ಯಾರ್ಥಿ ನಿಲಯಗಳಲ್ಲಿ ನೀರು, ವಿದ್ಯುತ್, ಶಾಚಾಲಯ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳಲ್ಲಿ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು;</td><td>ಇಲಾಖೆ ವಿದ್ಯಾರ್ಥಿ ನಿಲಯಗಳಲ್ಲಿ ನೀರು, ವಿದ್ಯುತ್, ಶೌಚಾಲಯ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಲು ತಾಲ್ಲೂಕು/ಜಿಲ್ಲಾ ವಲಯಗಳಲ್ಲಿ ನಿರ್ವಹಣೆಗಾಗಿ 2025-26ನೇ ಸಾಲಿಗೆ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವಿದ್ಯಾರ್ಥಿ ನಿಲಯಗಳ ಲೆಕ್ಕಶೀರ್ಷಿಕೆವಾರು ವಿವರ</th><th>ಒದಗಿಸಲಾದ ಅನುದಾನ (ರೂ.ಲಕ್ಷಗಳಲ್ಲಿ</th></tr>
<tr><td>1</td><td>2225-00-101-0-61<br>ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ</td><td>54,721.79</td></tr>
<tr><td>2</td><td>2225-00-101-0-29<br>ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ನಿರ್ವಹಣೆ</td><td>42,815.10</td></tr>
</table></td></tr>
</table>

---2

<table>
<tr>
<td>ಇ)</td>
<td>ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಒದಗಿಸುತ್ತಿರುವ ಮೂಲಭೂತ ಸೌಕರ್ಯಗಳಲ್ಲಿ ಯಾವ ರೀತಿಯ ಬದಲಾವಣೆಗಳನ್ನು ತರಲಾಗಿದೆ;</td>
<td>ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ.<br><br>ಕಳೆದ ಮೂರು ವರ್ಷಗಳಲ್ಲಿ ರಾಜ್ಯ ವಲಯದಿಂದ ಈ ಕೆಳಕಂಡಂತೆ ಮೂಲಭೂತ ಸೌಕರ್ಯಗಳನ್ನು ಪೂರೈಸಲಾಗಿರುತ್ತದೆ.<br><br>
<table>
<tr><th>ಕ್ರ. ಸಂ</th><th>ವರ್ಷ</th><th>ಸಾಮಾಗ್ರಿಗಳ ವಿವರ</th><th>ಸಂಖ್ಯೆ</th><th>ಅನುದಾನ (ರೂ ಲಕ್ಷಗಳಲ್ಲಿ)</th></tr>
<tr><td>1</td><td>2022–23</td><td>ಸಿಸಿಟಿವಿ ಗಳು</td><td>82 ವಿ.ನಿಲಯಗಳು</td><td>232.00</td></tr>
<tr><td>2</td><td>2022–23</td><td>ಡೈನಿಂಗ್ ಟೇಬಲ್</td><td>1061 ವಿ.ನಿಲಯಗಳು</td><td>200.00</td></tr>
<tr><td>3</td><td>2022–23</td><td>ಸೋಲಾರ್ ವಾಟರ್ ಹೀಟರ್</td><td>500 ಎಲ್‌ಪಿಡಿ 132<br>1000 ಎಲ್‌ಪಿಡಿ 131</td><td>545.00</td></tr>
<tr><td>4</td><td>2022–23</td><td>ಡೀಸೆಲ್ ಜನರೇಟರ್</td><td>70 ವಿ.ನಿಲಯಗಳು</td><td>355.00</td></tr>
<tr><td>5</td><td>2023–24</td><td>ಟೂ ಟಯರ್ ಕಾಟ್‌ಗಳು</td><td>3663 ಸಂಖ್ಯೆ</td><td>900.00</td></tr>
<tr><td>6</td><td>2023–24</td><td>ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ</td><td>16809 ಸಂಖ್ಯೆ</td><td>900.00</td></tr>
<tr><td>7</td><td>2024–25</td><td>ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ</td><td>9094</td><td>500.00</td></tr>
<tr><td>8</td><td>2024–25</td><td>ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ</td><td>8404</td><td>450.00</td></tr>
</table>
</td>
</tr>
<tr>
<td>ಈ)</td>
<td>ಕಳೆದ ಮೂರು ವರ್ಷಗಳಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ; ಮುಂದಿನ ದಿನಗಳಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)</td>
<td>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿ ನಿಲಯಗಳ ಪೈಕಿ ಕಳೆದ ಮೂರು ವರ್ಷಗಳಲ್ಲಿ 192 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಇಲಾಖೆಯ ವತಿಯಿಂದ ನಡೆಸುತ್ತಿರುವ 47 ವಿದ್ಯಾರ್ಥಿ ನಿಲಯಗಳಿಗೆ ನಿವೇಶನಗಳು ಲಭ್ಯವಿದ್ದು, ಸದರಿ ವಿದ್ಯಾರ್ಥಿನಿಲಯಗಳಿಗೆ ಅನುದಾನ ಲಭ್ಯತೆಗೆ ಅನುಗುಣವಾಗಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿರುತ್ತದೆ.</td>
</tr>
</table>

**ಸಕಇ 246 ಪಕವಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

**ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ (1ನೇ ತರಗತಿಯಿಂದ 5ನೇ ತರಗತಿ) ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ**

| ಕ್ರ. ಸಂ | ಜಿಲ್ಲೆಯ ಹೆಸರು | ವಸತಿ ಶಾಲೆ | ಮೆಟ್ರಿಕ್ ಪೂರ್ವ ವಿ.ನಿಲಯಗಳು | | | ಮೆಟ್ರಿಕ್ ನಂತರ ವಿ.ನಿಲಯಗಳು | | | ದೀನದಯಾಳ್ ಉಪಾಧ್ಯಾಯ | | | ಒಟ್ಟು |
|---|---|---|---|---|---|---|---|---|---|---|---|---|
| | | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | |
| 1 | ಬಾಗಲಕೋಟೆ | 3 | 33 | 11 | 44 | 15 | 10 | 25 | 0 | 0 | 0 | 72 |
| 2 | ಬಳ್ಳಾರಿ | 1 | 17 | 5 | 22 | 12 | 6 | 18 | 0 | 0 | 0 | 41 |
| 3 | ಬೆಳಗಾವಿ | 3 | 51 | 15 | 66 | 20 | 11 | 31 | 0 | 0 | 0 | 100 |
| 4 | ಬೆಂಗಳೂರು (ಗ್ರಾ) | 0 | 18 | 5 | 23 | 5 | 5 | 10 | 0 | 0 | 0 | 33 |
| 5 | ಬೆಂಗಳೂರು (ನ) | 2 | 10 | 3 | 13 | 24 | 23 | 47 | 0 | 0 | 0 | 62 |
| 6 | ಬೀದರ್ | 6 | 34 | 8 | 42 | 12 | 7 | 19 | 0 | 0 | 0 | 67 |
| 7 | ಚಾಮರಾಜನಗರ | 0 | 29 | 11 | 40 | 7 | 9 | 16 | 0 | 0 | 0 | 56 |
| 8 | ಚಿಕ್ಕಬಳ್ಳಾಪುರ | 1 | 39 | 10 | 49 | 15 | 8 | 23 | 0 | 0 | 0 | 73 |
| 9 | ಚಿಕ್ಕಮಗಳೂರು | 2 | 25 | 12 | 37 | 13 | 9 | 22 | 0 | 0 | 0 | 61 |
| 10 | ಚಿತ್ರದುರ್ಗ | 0 | 37 | 15 | 52 | 23 | 18 | 41 | 0 | 0 | 0 | 93 |
| 11 | ದಕ್ಷಿಣ ಕನ್ನಡ | 1 | 11 | 8 | 19 | 5 | 6 | 11 | 0 | 0 | 0 | 31 |
| 12 | ದಾವಣಗೆರೆ | 0 | 29 | 9 | 38 | 18 | 12 | 30 | 0 | 0 | 0 | 68 |
| 13 | ಧಾರವಾಡ | 1 | 9 | 5 | 14 | 14 | 7 | 21 | 1 | 1 | 2 | 38 |
| 14 | ಗದಗ | 2 | 21 | 5 | 26 | 12 | 7 | 19 | 0 | 0 | 0 | 47 |
| 15 | ಹಾಸನ | 4 | 42 | 17 | 59 | 17 | 17 | 34 | 0 | 0 | 0 | 97 |
| 16 | ಹಾವೇರಿ | 7 | 29 | 8 | 37 | 14 | 9 | 23 | 0 | 0 | 0 | 67 |
| 17 | ಕಲಬುರಗಿ | 11 | 62 | 10 | 72 | 22 | 14 | 36 | 1 | 1 | 2 | 121 |
| 18 | ಕೊಡಗು | 1 | 10 | 7 | 17 | 2 | 2 | 4 | 0 | 0 | 0 | 22 |
| 19 | ಕೋಲಾರ | 1 | 38 | 14 | 52 | 13 | 6 | 19 | 0 | 0 | 0 | 72 |
| 20 | ಕೊಪ್ಪಳ | 1 | 26 | 7 | 33 | 11 | 7 | 18 | 0 | 0 | 0 | 52 |
| 21 | ಮಂಡ್ಯ | 0 | 33 | 13 | 46 | 11 | 11 | 22 | 0 | 0 | 0 | 68 |
| 22 | ಮೈಸೂರು | 2 | 34 | 11 | 45 | 20 | 20 | 40 | 0 | 0 | 0 | 87 |
| 23 | ರಾಯಚೂರು | 7 | 35 | 11 | 46 | 18 | 13 | 31 | 0 | 0 | 0 | 84 |
| 24 | ರಾಮನಗರ | 0 | 28 | 9 | 37 | 7 | 6 | 13 | 0 | 0 | 0 | 50 |
| 25 | ಶಿವಮೊಗ್ಗ | 2 | 35 | 14 | 49 | 15 | 15 | 30 | 0 | 0 | 0 | 81 |
| 26 | ತುಮಕೂರು | 2 | 49 | 13 | 62 | 25 | 16 | 41 | 0 | 0 | 0 | 105 |
| 27 | ಉಡುಪಿ | 0 | 9 | 6 | 15 | 4 | 4 | 8 | 0 | 0 | 0 | 23 |
| 28 | ಉತ್ತರಕನ್ನಡ | 3 | 17 | 9 | 26 | 5 | 2 | 7 | 0 | 0 | 0 | 36 |
| 29 | ವಿಜಯನಗರ | 1 | 29 | 10 | 39 | 17 | 7 | 24 | 0 | 0 | 0 | 64 |
| 30 | ವಿಜಯಪುರ | 1 | 46 | 11 | 57 | 12 | 9 | 21 | 0 | 0 | 0 | 79 |
| 31 | ಯಾದಗಿರಿ | 2 | 32 | 6 | 38 | 11 | 4 | 15 | 0 | 0 | 0 | 55 |
| | **ಒಟ್ಟು** | **67** | **917** | **298** | **1215** | **419** | **300** | **719** | **2** | **2** | **4** | **2005** |